

ಶಿಮ್ಲಾ ಪ್ರವಾಸಕ್ಕೆ ಹೋದವರು ಕುಫ್ರಿ ಎಂಬ ಹಿಮತಾಣಕ್ಕೆ ಹೋಗದೇ ಬಂದರೆ ಬಹುದೊಡ್ಡ ಅನುಭವವನ್ನು ಕಳೆದುಕೊಂಡ ಹಾಗೆ. ಕುದುರೆ ಸವಾರಿಯ ರೋಚಕ ಅನುಭವದೊಂದಿಗೆ ಆರಂಭವಾಗಿ ಬಿಸಿ ಬಿಸಿ ಮ್ಯಾಗಿಯ ಸ್ವಾದದೊಟ್ಟಿಗೆ ಕೊನೆಗೊಳ್ಳುವ ಕುಫ್ರಿಯ ಪ್ರವಾಸ ಎಲ್ಲೋ ತಿಂದ ರುಚಿಕಟ್ಟಾದ ಕುಲ್ಫಿಯ ಸ್ವಾದದ ನೆನಪಿನ ಹಾಗೆ ಮನಸಲ್ಲಿ ಶಾಶ್ವತ ಉಳಿಯುವಂಥದ್ದು.



ಕುಫ್ರಿಯ ಕಣಿವೆಯಲ್ಲಿ ಕುದುರೆಗಳ ಮಾಲೀಕ ದೀಪಕ್

ಏರುವ ದಾರಿಯಲ್ಲಿ ಸಾಗುವುದು ಕಠಿಣ. ಹೀಗಾಗಿ ಪ್ರವಾಸಿಗರನ್ನು ಕುದುರೆಯ ಬೆನ್ನ ಮೇಲೆ ಕೂರಿಸಿ, ಕುಫ್ರಿಯ ನೆತ್ತಿಯೇರಿಸಿ ಇಳಿಸುವುದು ಇಲ್ಲಿನ ಹಲವು ಯುವಕರಿಗೆ ಕಾಯಕ. ಆ ಕಣಿವೆಯ ದಾರಿಯ ಶುರುವಿನ ಜಾಗದ ತುಂಬ ಕೆಂಪು, ಬಿಳಿ, ಕಪ್ಪು, ಹೀಗೆ ಬಗೆ ಬಗೆಯ ಕುದುರೆಗಳ ಹಿಂಡೇ ಜಮಾಯಿಸಿದ್ದವು. ಜೊತೆಗೆ ಅದರ ಮಾಲೀಕರು.

ನಾವು ಸರತಿ ಸಾಲಿನಲ್ಲಿ ಕುದುರೆಯೇರಲು ಉತ್ಸುಕರಾದೆವು. ಆದರೆ, ಕೆಲವು ಕುದುರೆಗಳ ಜೀನು ಎಳೆ ಬೆರಳುಗಳ ಕೈಯಲ್ಲಿ ಇದ್ದಿದ್ದರಿಂದ ಕೆಲವರು ಅದನ್ನು ಏರಲು ಹಿಂದೆ ಮುಂದೆ ನೋಡಿದರು. ಅದಕ್ಕೆ ಪ್ರತಿಸ್ಪಂದಿಸುವಂತೆ ಎಳೆಗೈ ಬಾಲಕ ಕಣ್ಣುಗಳಲ್ಲೇ 'ಕುದುರೆ ಏರಿ, ಹೆಚ್ಚು ಸಮಯವಿಲ್ಲ' ಎಂಬಂತೆ ಆಜ್ಞೆ ಮಾಡಿದ. ಅವನ ಧ್ವನಿಯಲ್ಲಿಯೇ ನಿಮ್ಮನ್ನು ಸುರಕ್ಷಿತವಾಗಿ ಕೊಂಡೊಯ್ದು ತರುವ ಜವಾಬ್ದಾರಿ ನಂದು ಎಂಬ ಅಭಯವೂ ಇದ್ದಂತಿತ್ತು.

ಅತ್ತ ಇತ್ತ ನೋಡುತ್ತಿದ್ದಂತೆ ನನ್ನ ಸರದಿ. ಅಚ್ಚ ಬಿಳುಪಿನ 'ಸುಲ್ತಾನ್' ಹೆಸರಿನ ಕುದುರೆಯನ್ನು ಎಳೆದು ತಂದ ಚೂಪು ಮೂಗಿನ, 17ರ ಬಾಲಕ ದೀಪಕ್ ಮುಗ್ಧ ನಗೆ ಸೂಸಿ, ಕುದುರೆ ಏರುವಂತೆ ಸೂಚಿಸಿದ. ಹಿಂದಿಯಲ್ಲಿ ಏನೇನೋ ಹೇಳಿದ. ಏನು ಹೇಳಿದನೆಂಬುದು ನನಗೆ ಅರ್ಥವಾಗದೇ ಸುಮ್ಮನೆ ಕಣ್ಣುಬಿಡುತ್ತ ನಿಂತಾಗ, 'ಮೇಡಂ ಜೀ, ಢರ್ ನಾ ಮತ್, ತೋಡ ಸ ಟೈಟ್ ಪಕೊಡೊ' ಎಂದು ಕುದುರೆಯ ಡುಬ್ಬದ ಮೇಲೆ ತೋರಿಸಿ ಹೇಳಿದ.

ನಾನು ಬೆನ್ನೇರಿದ ಮೇಲೆ ಕುದುರೆ ಒಂದೊಂದಾಗಿ ಹೆಜ್ಜೆಯಿಕ್ಕುತ್ತಾ ಏರು ಹತ್ತತೊಡಗಿತು. ಆರಂಭದಲ್ಲಿ ಆಚೀಚೆ ಓಲಾಡಿದಾಗ ಭಯವಾದರೂ ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ ಕುದುರೆ ನಡಿಗೆಗೆ ಒಗ್ಗಿಕೊಂಡೆ. ಮತ್ತಿಷ್ಟು ದೂರ ಸಾಗುವಷ್ಟರಲ್ಲಿ ಕುದುರೆಯ ಜೀನು ಹಿಡಿದಿದ್ದ ದೀಪಕನ ಜತೆ ಹರಟುವಷ್ಟು ಸುಧಾರಿಸಿಕೊಂಡೆ. ಏರಿಯ ದಾರಿಯ ಜತೆಗೇ ನಮ್ಮ ಮಾತುಕತೆಯೂ ಸಾಗಿತ್ತು.

'ಶಾಲೆಗೆ ಹೋಗಿ ಕಲಿತಿದ್ದೆಲ್ಲ ಅಷ್ಟಕ್ಕಷ್ಟೆ. ಈ ಕಣಿವೆಯೇ ನನಗೆ ಶಾಲೆ. ನನ್ನ ಬಳಿ ಇರುವ ನಾಲ್ಕು ಕುದುರೆಗಳೇ ನನ್ನ ಸ್ನೇಹಿತರು. ಇಲ್ಲಿ ಸುಮಾರು 45